**National**
**Kannada**
**02.10.2026 7.35 pm**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಭಾರತ ಸೇರಿ ವಿಶ್ವಾದ್ಯಂತ ರಾಷ್ಟ್ರಪಿತ ಮಹಾತ್ಮ ಗಾಂಧಿ, ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆ

೨. ಒಂದು ಲಕ್ಷ ೮೬ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಹಸಿರು ಇಂಧನ ಕಾರಿಡಾರ್ ಹಂತ-೩ಕ್ಕೆ ಭಾರತ ಅನುಮೋದನೆ; ವಿಶ್ವಸಂಸ್ಥೆ ಸ್ವಾಗತ

೩. ಏಷ್ಯನ್ ಗೇಮ್ಸ್: ಇಂದು ಒಂದೇ ದಿನ ಭಾರತಕ್ಕೆ ಆರು ಸ್ವರ್ಣ, ಪದಕ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಏರಿಕೆ

೪. ಏಷ್ಯನ್ ಕ್ರೀಡಾಕೂಟ: ಹಾಕಿ ಸ್ಪರ್ಧೆಯ ಫೈನಲ್‌ನಲ್ಲಿ ಗೆದ್ದು ೨೦೨೮ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತ ಮಹಿಳಾ ತಂಡ

**<><><*><><>**

ಮಹಾತ್ಮ ಗಾಂಧೀಜಿ ಅವರ ೧೫೭ನೇ ಜಯಂತಿ ಹಿನ್ನೆಲೆ ರಾಜ್‌ಘಾಟ್‌ನಲ್ಲಿಂದು ಪ್ರಾರ್ಥನಾ ಸಭೆ ನಡೆಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗಾಂಧೀಜಿ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅನೇಕ ಗಣ್ಯರು ರಾಜ್‌ಘಾಟ್‌ನಲ್ಲಿ ಗಾಂಧೀಜಿ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಿದರು. ಮಹಾತ್ಮ ಗಾಂಧೀಜಿ ಅವರ ಇಡೀ ಜೀವನ, ಸತ್ಯ, ಅಹಿಂಸೆ, ಕರುಣೆ ಮತ್ತು ಸೇವೆಗೆ ದಾರಿದೀಪವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ. ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ೧೨೨ನೇ ಜಯಂತಿಯನ್ನು ದೇಶಾದ್ಯಂತ ಇಂದು ಆಚರಿಸಲಾಯಿತು. ೧೯೦೪ರ ಅಕ್ಟೋಬರ್ ೨ರಂದು ಉತ್ತರ ಪ್ರದೇಶದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ನಗರದಲ್ಲಿ, ಅಂದಿನ ಮುಘಲ್‌ಸರಾಯ್‌ನಲ್ಲಿ ಅವರು ಜನಿಸಿದರು. ಹದಿಹರೆಯದಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಶಾಸ್ತ್ರಿ ಅವರು ೧೯೨೧ರ ಅಸಹಕಾರ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಸ್ವಾತಂತ್ರ್ಯಾ ನಂತರ ಉತ್ತರ ಪ್ರದೇಶ ಸರ್ಕಾರದಲ್ಲಿ ಹಾಗೂ ಬಳಿಕ ಕೇಂದ್ರ ಸರ್ಕಾರದಲ್ಲಿ ಹಲವು ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದರು. ಇಂದು ಅವರ ಜಯಂತಿ ಅಂಗವಾಗಿ, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಮಂತ್ರಿ ನರೇಂದ್ರ ಮೋದಿ,

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಇಂದು ನವದೆಹಲಿಯ ವಿಜಯ್ ಘಾಟ್‌ನಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ಸ್ಮಾರಕಕ್ಕೆ ತೆರಳಿ ಪುಷ್ಪನಮನ ಸಲ್ಲಿಸಿದರು.

<>><><*><><<>

ಪ್ರಪಂಚದಾದ್ಯಂತ ಇರುವ ಭಾರತೀಯ ರಾಯಭಾರ ಕಚೇರಿಗಳಲ್ಲಿ ಇಂದು ಮಹಾತ್ಮ ಗಾಂಧಿಯವರ ೧೫೬ನೇ ಜನ್ಮದಿನವನ್ನು ಆಚರಿಸಲಾಯಿತು. ಚೀನಾದ ಬೀಜಿಂಗ್‌ನಲ್ಲಿ, ಭಾರತೀಯ ರಾಯಭಾರಿ ವಿಕ್ರಮ್ ದೊರೈಸ್ವಾಮಿ, ಭಾರತೀಯ ಸಮುದಾಯದ ಸದಸ್ಯರು ಮತ್ತು ಸ್ಥಳೀಯ ಗಣ್ಯರೊಂದಿಗೆ ಸೇರಿ ಮಹಾತ್ಮ ಗಾಂಧಿಯವರಿಗೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಚೀನೀ ಕಲಾವಿದರು ಸಂಗೀತದ ಮೂಲಕ ಗೌರವ ಸಲ್ಲಿಸಿದರೆ, ಭಾರತೀಯ ಸಮುದಾಯದ ಸದಸ್ಯರು, ಗಾಂಧಿಯವರ ನೆಚ್ಚಿನ ಭಜನೆಗಳನ್ನು ಹಾಡಿದರು. ಜಪಾನ್‌ನಲ್ಲಿ, ರಾಯಭಾರಿ ನಾಗುಮಾ ಮಲ್ಲಿಕ್ ಮತ್ತು ಭಾರತೀಯ ಸಮುದಾಯದ ಸದಸ್ಯರು, ಟೋಕಿಯೋದ ಎಡೋಗಾವಾದಲ್ಲಿರುವ ಮಹಾತ್ಮ ಗಾಂಧಿಯವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಯುಎಇಯಲ್ಲಿ ಭಾರತೀಯ ಸಮುದಾಯದಿಂದ ಗಾಂಧಿ ಜಯಂತಿ ಆಚರಿಸಲಾಯಿತು. ಪಾಕಿಸ್ತಾನ, ನೇಪಾಳ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಬಹ್ರೇನ್ ಮತ್ತು ದಕ್ಷಿಣ ಕೊರಿಯಾಗಳಲ್ಲೂ ಇದೇ ರೀತಿಯ ಸ್ಮರಣಾರ್ಥ ಕಾರ್ಯಕ್ರಮಗಳನ್ನು ನಡೆಸಲಾಯಿತು. ಅನೇಕ ದೇಶಗಳಲ್ಲಿ ನಡೆದ ಈ ಸ್ಮರಣಾರ್ಥ ಕಾರ್ಯಕ್ರಮಗಳಲ್ಲಿ ಸಂಗೀತ ಪ್ರದರ್ಶನಗಳು, ಭಕ್ತಿಗೀತೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದ್ದವು. ಮಂಗೋಲಿಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ ಮತ್ತು ಟರ್ಕಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಗಳಲ್ಲೂ ಗಾಂಧಿ ಜಯಂತಿ ಆಚರಿಸಲಾಯಿತು.

<>><><*><><<>

ಒಂದು ಲಕ್ಷ ೮೯ ಸಾವಿರ ಕೋಟಿ ರೂಪಾಯಿಗಳ ಹಸಿರು ಇಂಧನ ಕಾರಿಡಾರ್ ಹಂತ -೩ಕ್ಕೆ ಭಾರತ ಅನುಮೋದನೆ ನೀಡಿರುವುದನ್ನು ವಿಶ್ವಸಂಸ್ಥೆ ಸ್ವಾಗತಿಸಿದೆ. ಈ ಗ್ರಿಡ್ ಬಲಪಡಿಸುವಿಕೆ ಮತ್ತು ಬ್ಯಾಟರಿ ಸಂಗ್ರಹಣ ಯೋಜನೆಯು, ದೇಶದ ಜನರು ಮತ್ತು ಆರ್ಥಿಕತೆಗೆ ದೊಡ್ಡಮಟ್ಟದಲ್ಲಿ ಲಾಭವಾಗುವ ಪ್ರಮುಖ ಹೆಜ್ಜೆಯಾಗಿದೆ ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ವಿಭಾಗದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಸೈಮನ್ ಸ್ಟೀಲ್ ಶ್ಲಾಘಿಸಿದ್ದಾರೆ. ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಈ ಉಪಕ್ರಮವು ಭಾರತ ತನ್ನ ಬೆಳೆಯುತ್ತಿರುವ ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಬಲಪಡಿಸಿಕೊಳ್ಳಲು, ಹೆಚ್ಚುತ್ತಿರುವ ವಿದ್ಯುತ್ ಅಗತ್ಯಗಳನ್ನು ಪೂರೈಸಲು ಹಾಗೂ ಸೌರಶಕ್ತಿ ವಲಯದಲ್ಲಿ ಜಾಗತಿಕ ನಾಯಕನಾಗಿ ತನ್ನ ಸ್ಥಾನವನ್ನು ಬಲಪಡಿಸಲು ಮತ್ತಷ್ಟು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

<>><><*><><<>

ಜಾಗತಿಕ ಶಾಂತಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ನಡೆಸುತ್ತಿರುವ ಅವಿರತ ಪ್ರಯತ್ನಗಳನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶ್ಲಾಘಿಸಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಹಾತ್ಮ ಗಾಂಧೀಜಿಯವರ ಜನ್ಮದಿನದಂದೇ ಪುಟಿನ್ ಅವರು ನೀಡಿರುವ ಈ ಹೇಳಿಕೆಯು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ, ಜಾಗತಿಕ ಶಾಂತಿಗಾಗಿ ವಿಶ್ವಾಸಾರ್ಹ ಧ್ವನಿಯಾಗಿ ಹೊರಹೊಮ್ಮಿದೆ ಎಂಬುದನ್ನು ಸಾಬೀತುಪಡಿಸುತ್ತದೆ ಎಂದು ಹೇಳಿದರು. ಯುದ್ಧಗಳು, ಸಂಘರ್ಷಗಳು ಮತ್ತು ಅಸ್ಥಿರತೆಯಂತಹ ಸಂದರ್ಭಗಳಲ್ಲಿಯೂ, ಸಮಸ್ಯೆಗಳಿಗೆ ಪರಿಹಾರಗಳು ಯುದ್ಧಭೂಮಿಯಿಂದಲ್ಲ, ಬದಲಾಗಿ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕವೇ ದೊರೆಯುತ್ತವೆ ಎಂಬ ಸಂದೇಶವನ್ನು ಪ್ರಧಾನಿ ನರೇಂದ್ರ ಮೋದಿ ಸಾರಿದ್ದಾರೆ. ಇದು ಭಾರತದ ’ವಸುಧೈವ ಕುಟುಂಬಕಂ’ ಎಂಬ ಶಾಶ್ವತ ಸಂಪ್ರದಾಯಕ್ಕೆ ಮನ್ನಣೆ ತಂದುಕೊಟ್ಟಿದೆ ಎಂದು ಸಚಿವ ಅಮಿತ್ ಶಾ ಹೇಳಿದ್ದಾರೆ.

<>><><*><><<>

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ, ಜನ ಸೇವೆಯಿಂದ ದೇಶ ಸೇವೆ ಎಂಬ ಅಭಿಯಾನ ನಡೆಯುತ್ತಿದೆ. ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ ’ವಿಕಸಿತ ಭಾರತ’ ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ಕೇಂದ್ರ ಸರ್ಕಾರ ಬ್ಯಾಂಕಿಂಗ್ ಕ್ಷೇತ್ರದ ಪುನಶ್ಚೇತನಕ್ಕಾಗಿ ಕೈಗೊಂಡಿರುವ ಕ್ರಮಗಳ ಕುರಿತ ವರದಿ ಇಲ್ಲಿದೆ. ಭಾರತದ ಸಾಲ ಮಾರುಕಟ್ಟೆಯು ಹಿಂದೆ ನೈಜ ಆರ್ಥಿಕ ಬೆಳವಣಿಗೆಗಿಂತ ’ಫೋನ್ ಬ್ಯಾಂಕಿಂಗ್’ ಸಂಸ್ಕೃತಿಯಿಂದ ಪ್ರಭಾವಿತಗೊಂಡಿತ್ತು. ಕರೆಗಳ ಮೂಲಕ ಯಾವುದೇ ಪರಿಶೀಲನೆಯಿಲ್ಲದೆ, ಬೃಹತ್ ಸಾಲ ನೀಡುವುದು ಹಾಗೂ ನೀಡಿದ ಸಾಲ ವಸೂಲಾಗದಿದ್ದಾಗ, ಅದನ್ನು ಮುಚ್ಚಿಹಾಕಲು ಮತ್ತೆ ಹೆಚ್ಚುವರಿ ಸಾಲ ನೀಡುವ ಅಭ್ಯಾಸವು ಬ್ಯಾಂಕುಗಳ ವಿಶ್ವಾಸಾರ್ಹತೆಯನ್ನು ಕುಸಿಯುವಂತೆ ಮಾಡಿತ್ತು. ಇದಕ್ಕೆ ಅಂತ್ಯಹಾಡಲು ಕೇಂದ್ರ ಸರ್ಕಾರ, ’ಆಸ್ತಿ ಗುಣಮಟ್ಟ ಪರಾಮರ್ಶೆ’ ಜಾರಿಗೆ ತಂದಾಗ, ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿದ್ದ ಸಾಲದ ಪ್ರಮಾಣ, ಶೇಕಡಾ ೧೫ಕ್ಕೇರಿರುವುದು ಬೆಳಕಿಗೆ ಬಂದಿತು. ಇದನ್ನು ಸರಿಪಡಿಸಲು ಸರ್ಕಾರ ತ್ವರಿತ ಪತ್ತೆಹಚ್ಚುವಿಕೆ, ಪರಿಹಾರ, ಮರುಬಂಡವಾಳ ಹೂಡಿಕೆ ಹಾಗೂ ಸುಧಾರಣೆಗಳನ್ನೊಳಗೊಂಡ ’೪-ಆರ್’ ತಂತ್ರಜ್ಞಾನ ಮತ್ತು ದಿವಾಳಿತನ ಕುರಿತ ಸ್ಪಷ್ಟ ನಿಬಂಧನೆಗಳನ್ನು ಹೊಂದಿರುವ ಕಾಯ್ದೆಯನ್ನು

ಜಾರಿಗೆ ತಂದಿತು.  ಈ ಸಾಂಸ್ಥಿಕ ಸುಧಾರಣೆಗಳಿಂದ ಬ್ಯಾಂಕುಗಳು ಅನುತ್ಪಾದಕ ಸಾಲಗಳ ಹೊರೆಯನ್ನು ಕಳೆದುಕೊಂಡು, ದೇಶದ ಕ್ಷಿಪ್ರ ಆರ್ಥಿಕ ಪ್ರಗತಿಗೆ ಸಶಕ್ತ ಬೆಂಬಲ ನೀಡಲು ಸಜ್ಜಾಗಿವೆ.

<>><><*><><<>

ಜಪಾನ್‌ನ ಐಚಿ - ನಗೋಯಾನಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪದಕ ಬೇಟೆ ಮುಂದುವರಿದಿದೆ. ೧೩ನೇ ದಿನವಾದ ಇಂದು ಭಾರತ ೬ ಚಿನ್ನದ ಪದಕಗಳನ್ನು ಗೆದ್ದಿದೆ. ಇವುಗಳಲ್ಲಿ ಬಾಕ್ಸಿಂಗ್‌ನಲ್ಲಿ ೩, ಕುಸ್ತಿಯಲ್ಲಿ ೧, ಬಿಲ್ಲುಗಾರಿಕೆಯಲ್ಲಿ ೧ ಮತ್ತು ಹಾಕಿಯಲ್ಲಿ ೧ ಸ್ವರ್ಣ ಪದಕ ಸೇರಿದೆ. ಭಾರತದ ಮಹಿಳಾ ಹಾಕಿ ತಂಡ, ತೀವ್ರ ಪೈಪೋಟಿಯಿಂದ ಕೂಡಿದ್ದ ಫೈನಲ್ ಪಂದ್ಯದಲ್ಲಿ ಚೀನಾ ತಂಡವನ್ನು ೧-೦ ಅಂತರದಿಂದ ಸೋಲಿಸಿ, ಚಿನ್ನದ ಪದಕ ಗೆದ್ದಿದೆ. ಭಾರತದ ಪರವಾಗಿ ಲಾಲ್‌ರೆಮ್ಸಿಯಾಮಿ ಹ್ಮಾರ್ಜೋಟೆ ನಿರ್ಣಾಯಕ ಗೋಲು ಗಳಿಸಿದರೆ, ಗೋಲ್‌ಕೀಪರ್ ಸವಿತಾ ಪುನಿಯಾ, ಪೆನಾಲ್ಟಿ ಸ್ಟ್ರೋಕ್ ಅನ್ನು ತಡೆಯುವ ಮೂಲಕ ತಂಡದ ಮುನ್ನಡೆಯನ್ನು ಕಾಯ್ದುಕೊಂಡರು. ಈ ಗೆಲುವಿನೊಂದಿಗೆ ಭಾರತ, ಏಷ್ಯನ್ ಕ್ರೀಡಾಕೂಟದಲ್ಲಿ ೪೪ ವರ್ಷಗಳ ನಂತರ ಮಹಿಳಾ ಹಾಕಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದೆ. ಅಲ್ಲದೇ ಲಾಸ್ ಏಂಜಲಿಸ್‌ನಲ್ಲಿ ನಡೆಯಲಿರುವ ಮುಂಬರುವ ೨೦೨೮ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದೆ. ಪುರುಷರ ೬೫ ಕೆಜಿ ಫ್ರೀ ಸ್ಟೈಲ್ ಕುಸ್ತಿ ವಿಭಾಗದಲ್ಲಿ ಭಾರತೀಯ ಕುಸ್ತಿ ಪಟು ಸುಜಿತ್ ಕಲ್ಕಲ್ ಚಿನ್ನದ ಪದಕ ವಿಜೇತರಾಗಿದ್ದಾರೆ. ಫೈನಲ್‌ನಲ್ಲಿ ಅವರು, ತಜಕಿಸ್ತಾನದ ಅಬ್ದುಲ್ ಮಜೀದ್ ಕದೀವ್ ಅವರನ್ನು ೧೦-೯ ಅಂಕಗಳಿಂದ ಮಣಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಬಾಕ್ಸಿಂಗ್‌ನ ಮಹಿಳೆಯರ ೬೫ ಕೆಜಿ ವಿಭಾಗದಲ್ಲಿ ಪರ್ವೀನ್ ಹೂಡಾ ಚಿನ್ನದ ಪದಕ ಗೆದ್ದಿದ್ದಾರೆ. ಫೈನಲ್‌ನಲ್ಲಿ ಅವರು, ಚೈನೀಸ್ ತೈಪೆಯ ನಿಯೆನ್- ಚಿನ್ ಚೆನ್ ಅವರನ್ನು ೩-೨ ಅಂತರದಿಂದ ಸೋಲಿಸಿದರು. ಮಹಿಳೆಯರ ೭೫ ವಿಭಾಗದ ಫೈನಲ್‌ನಲ್ಲಿ ಲವ್ಲಿನಾ, ಚೀನಾದ ಬಾವೊ ಜಿಯಿ ಅವರನ್ನು ೫-೦ ಅಂತರದಿಂದ ಮಣಿಸಿ, ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ. ಬಾಕ್ಸಿಂಗ್‌ನ ಪುರುಷರ ೮೦ ಕೆಜಿ ವಿಭಾಗದ ಫೈನಲ್ ಪಂದ್ಯದಲ್ಲಿ ಅಂಕುಶ್ ಪಂಘಾಲ್, ದಕ್ಷಿಣ ಕೊರಿಯಾದ ಕಿಮ್ ಮಿನ್ಸಿಯಾಂಗ್ ಅವರನ್ನು ೪-೦ ಅಂತರದಿಂದ ಮಣಿಸಿ, ಸ್ವರ್ಣ ಪದಕ ವಿಜೇತರಾದರು.

ಬಿಲ್ಲುಗಾರಿಕೆಯಲ್ಲಿ ಭಾರತದ ಮಹಿಳಾ ರಿಕರ್ವ್ ತಂಡ, ಏಷ್ಯನ್ ಗೇಮ್ಸ್‌ನಲ್ಲಿ ಚೊಚ್ಚಲ ಚಿನ್ನದ ಪದಕ ಗೆದ್ದು, ಇತಿಹಾಸ ನಿರ್ಮಿಸಿತು. ಅಂಕಿತಾ ಭಕತ್, ಕೀರ್ತಿ ಶರ್ಮಾ, ಕುಂಕುಮ್ ಅವರನ್ನೊಳಗೊಂಡ ತಂಡ, ಫೈನಲ್‌ನಲ್ಲಿ ದಕ್ಷಿಣಾ ಕೊರಿಯಾ ತಂಡವನ್ನು ೫-೩ ಅಂತರದಿಂದ ಸೋಲಿಸಿತು. ಇದೇ ವೇಳೆ, ಭಾರತದ ಮಿಶ್ರ ರಿಕರ್ವ್ ತಂಡ, ಬೆಳ್ಳಿ ಪದಕ ವಿಜೇತವಾಯಿತು. ತೀವ್ರ ಪೈಪೋಟಿಯಿಂದ ಕೂಡಿದ್ದ ಫೈನಲ್‌ನಲ್ಲಿ ಕುಂಕುಮ್ ಮತ್ತು ಧೀರಜ್ ಬೊಮ್ಮದೇವರ

ಅವರನ್ನೊಳಗೊಂಡ ಮಿಶ್ರ ತಂಡ ಚೀನಾ ವಿರುದ್ಧ ೩-೫ ಅಂತರದಲ್ಲಿ ಸೋತು ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಸೆಪಕ್ ಟಕ್ರಾ ಸ್ಪರ್ಧೆಯಲ್ಲಿ ಭಾರತ ತಂಡ, ಕಂಚಿನ ಪದಕ ಗೆದ್ದಿದೆ. ಸೆಮಿಫೈನಲ್‌ನಲ್ಲಿ ಜಪಾನ್ ವಿರುದ್ಧ ೦-೨ ಅಂತರದಲ್ಲಿ ಸೋತು ಕಂಚಿನ ಪದಕ ಗಳಿಸಿತು. ಸೇಲಿಂಗ್ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ನೇತ್ರಾ ಕಂಚಿನ ಪದಕ ವಿಜೇತರಾದರು. ಈ ಮೂಲಕ ಏಷ್ಯನ್ ಗೇಮ್ಸ್ ಪದಕ ಪಟ್ಟಿಯಲ್ಲಿ ಒಟ್ಟು ೭೬ ಪದಕಗಳೊಂದಿಗೆ ಭಾರತ ಐದನೇ ಸ್ಥಾನಕ್ಕೇರಿದೆ. ಇದರಲ್ಲಿ ೧೬ ಚಿನ್ನ, ೨೫ ಬೆಳ್ಳಿ ಹಾಗೂ ೩೫ ಕಂಚಿನ ಪದಕಗಳು ಸೇರಿವೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>